ಉತ್ತರ

ಅ) ಹೌದು.

ಆ) ಯು.ಜಿಸಿ.ಯ ಸೂತ್ರಗಳನ್ನು ಮತ್ತು ಮಾರ್ಗಸೂಚಿಗಳನ್ನು ಪೂರೈಸುವುದು.

ಇ) ಹೌದು.

ಈ) (1) ಕರ್ನಾಟಕ ಚಿತ್ರಕಲಾ ಪರಿಷತ್, ಬೆಂಗಳೂರು.

(2) ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠ ಟ್ರಸ್ಟ್, ಬೆಂಗಳೂರು.

(3) ಜೆ.ಎಸ್.ಎಸ್. ಮಹಾವಿದ್ಯಾಪೀಠ, ಮೈಸೂರು.

(4) ಡಾ.ಯು.ಕೃಷ್ಣಾ ಮುನಿಯಾಲ್ ಮೆಮೋರಿಯಲ್ ಟ್ರಸ್ಟ್, ಉಡುಪಿ.

(5) ವೆಂಕಟೇಶ್ವರ ಎಜುಕೇಷನ್ ಸೊಸೈಟಿ, ಬೆಂಗಳೂರು.

(6) ಸಿದ್ದಾರ್ಥ ಎಜುಕೇಷನ್ ಸೊಸೈಟಿ, ತುಮಕೂರು.

(7) ಕರ್ನಾಟಕ ಲಿಂಗಾಯತ್ ಎಜುಕೇಷನ್ ಸೊಸೈಟಿ, ಬೆಳಗಾಂ.

(8) ಕರ್ನಾಟಕ ರೀಜನಲ್ ಇಂಜಿನೀಯರಿಂಗ್ ಕಾಲೇಜು, ಸುರತ್ಕಲ್.

ಉ) ಹೌದು.

ಊ) (1) ಕೆ.ಆರ್.ಇ.ಸಿ. ಸುರತ್ಕಲ್

(2) ಚಿತ್ರಕಲಾ ಪರಿಷತ್ತು, ಬೆಂಗಳೂರು.

ಶಾಲೆಗಳಲ್ಲಿ ಮಧ್ಯಾಹ್ನ ಉಪಹಾರ ಯೋಜನೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1130(167)

ಸದಸ್ಯರ ಹೆಸರು: ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು(ಶಿವಾಜಿನಗರ)

ಉತ್ತರಿಸುವ ಸಚಿವರು: ಶ್ರೀ ಹೆಚ್.ವಿಶ್ವನಾಥ್(ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು)

ಪ್ರಶ್ನೆ

ಅ. ಈಶಾನ್ಯ ಕರ್ನಾಟಕ ವಲಯದಲ್ಲಿ ಮಧ್ಯಾಹ್ನ ಉಪಾಹಾರ ಯೋಜನೆಯನ್ನು ಜಾರಿಗೆ ತರಲಾಗಿದೆಯೇ?

ಆ. ಹಾಗಿದ್ದಲ್ಲಿ, ಎಷ್ಟು ಶಾಲೆಗಳಲ್ಲಿ ಈ ಯೋಜನೆ ಜಾರಿಯಲ್ಲಿದೆ, ಹಾಗೂ ಎಷ್ಟು ಮಕ್ಕಳಿಗೆ ಇದರಿಂದ ಅನುಕೂಲವಾಗಿದೆ?

ಇ. ಈ ಯೋಜನೆ ರಾಜ್ಯ ಸರ್ಕಾರದ ಯೋಜನೆಯ ಅಥವಾ ಕೇಂದ್ರ ಸರ್ಕಾರದ್ದೆ?

ಈ. ಕೇಂದ್ರ ಸರ್ಕಾರದ ಯೋಜನೆ ಆದಲ್ಲಿ ಕೇಂದ್ರ ಸರ್ಕಾರದಿಂದ ಇದಕ್ಕಾಗಿ ಬಂದ ನೆರವು ಎಷ್ಟು?

ಉ. ಈ ಯೋಜನೆಯನ್ನು ಬೆಂಗಳೂರು ಹಾಗೂ ಇತರೆ ಭಾಗಗಳಲ್ಲಿ ಜಾರಿಗೆ ತರಲು ಸರ್ಕಾರ ಉದ್ದೇಶಿಸಿದೆಯೆ?

ಉತ್ತರ

ಅ. ಹೌದು. ರಾಯಚೂರು, ಕೊಪ್ಪಳ, ಬೀದರ್, ಬಳ್ಳಾರಿ, ಗುಲ್ಬರ್ಗಾ, ಬಿಜಾಪುರ್ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಮಾತ್ರ.

ಆ. 8952 ಶಾಲೆಗಳಲ್ಲಿ ಈ ಯೋಜನೆಯು ಜಾರಿಯಲ್ಲಿದ್ದು, 16 ಲಕ್ಷ ಮಕ್ಕಳು ಇದರ ಲಾಭ ಪಡೆಯಲಿದ್ದಾರೆ.

ಇ. ಕೇಂದ್ರ ಸರ್ಕಾರವು ಈ ಯೋಜನೆಯಡಿ ಪ್ರತಿ ಮಗುವಿಗೆ ತಿಂಗಳಿಗೆ 3 ಕೆ.ಜಿ. ಗೋಧಿ/ಅಕ್ಕಿಯನ್ನು ನೀಡುತ್ತದೆ. ಈ ಗೋಧಿ/ಅಕ್ಕಿಯನ್ನು ಬಳಸಿಕೊಂಡು ಉಳಿದ ವೆಚ್ಚ ಎಂದರೆ ಪಾತ್ರೆ, ಇಂಧನ, ಅಡಿಗೆಯವರ ವೇತನ, ಎಣ್ಣೆ ಬೇಳೆ, ಸಾಂಬಾರು ಪದಾರ್ಥಗಳಿಗೆ ತಗಲುವ ವೆಚ್ಚವನ್ನು ರಾಜ್ಯ ಸರ್ಕಾರ ಭರಿಸುತ್ತದೆ.

ಅಡಿಗೆ ಕೋಣೆಯನ್ನು ಪಿ.ಎಂ.ಜಿ.ಆರ್.ವೈ. ಯೋಜನೆಯಡಿ ನಿರ್ಮಿಸಲಾಗುತ್ತಿದೆ.

ಈ. ಅಕ್ಕಿ : ಗೋಧಿಯ ವೆಚ್ಚವನ್ನು ಹಾಗೂ ಇದರ ಸಾಗಾಣಿಕೆ ವೆಚ್ಚವನ್ನು ಕೇಂದ್ರ ಸರ್ಕಾರ ಭರಿಸುತ್ತದೆ.

ಉ. ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.